# ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್ (ಐಎಫ್ಎ)

**'ಪ್ರಾಜೆಕ್ಟ್ 560' ರ ಅಡಿಯಲ್ಲಿ**

**ಒಂದು ವರ್ಷದ ಸಂಗ್ರಹಾತ್ಮಕ ಕಲಾತ್ಮಕ ಹಾಗೂ ಸಾಂಸ್ಕೃತಿಕ ಸರಣಿ ಕಾರ್ಯಕ್ರಮಗಳ**

**ಪ್ರಸ್ತಾವನೆಗಳನ್ನು ನಿರೀಕ್ಷಿಸುತ್ತಿದೆ...**

**ಕೊನೆ ದಿನಾಂಕ : ಶುಕ್ರವಾರ, ಸೆಪ್ಟೆಂಬರ್ 14, 2018**

***ಪರಿಸರವಾದಿಗಳ ಗುಂಪು ಸ್ಥಳೀಯ ಉದ್ಯಾನವನಗಳಲ್ಲಿ ಆಟಗಳ ಮೂಲಕ ನಗರದ ಪರಿಸರದ ಕೆಲವು ಕಥೆಗಳನ್ನು ನಿರೂಪಿಸುತ್ತದೆ***

***ಒಂದು ಸಂಶೋಧನಾ ಸಂಸ್ಥೆ ಉದ್ಯೋಗಿ ಮಹಿಳೆಯರ ಕುರಿತಾದ ಅಂಕಿಅಂಶಗಳ ಮಾಹಿತಿಯನ್ನು ಕಾವ್ಯಾತ್ಮಕವಾಗಿ ರೂಪಾಂತರಗೊಳಿಸುತ್ತದೆ***

***ಒಂದು ಕಲಾ ಸಂಸ್ಥೆ ಬೀದಿ ಮಾರಾಟಗಾರರ ಕುರಿತಾದ ಕಥೆಗಳನ್ನು ಹಾಗೂ ರಚನೆಗಳನ್ನು ಮಾಸಿಕ ಪ್ರದರ್ಶಿಸುತ್ತದೆ***

***ಒಂದು ನೃತ್ಯ ಶಾಲೆ ನಗರದ ವೈವಿಧ್ಯಮಯ ಸಾರಿಗೆ ಮಾರ್ಗಗಳನ್ನು ಬೀದಿಯಲ್ಲಿ ಮರುಕಲ್ಪಿಸುತ್ತದೆ***

***ಒಂದು ರಂಗತಂಡ ನಗರದ ವಿಭಿನ್ನ ಭಾಷಿಕರ ನಡುವೆ ಒಂದು ಸಂವಾದವನ್ನು ಕಟ್ಟುತ್ತದೆ***

***ವಕೀಲರ ಒಂದು ಗುಂಪು ವಲಸೆ ಕಾರ್ಮಿಕರ ಹಾಗೂ ಸಂಗೀತಗಾರರ ಸಹಯೋಗದಲ್ಲಿ ಸಂಗೀತ ರೂಪದ ಸರಣಿ ಚರ್ಚೆಗಳನ್ನು ಸೃಷ್ಟಿಸುತ್ತದೆ***

ಈ ಮೇಲಿನವು ಪ್ರಾಜೆಕ್ಟ್ 560ರ ಅಡಿಯಲ್ಲಿ ನಿರ್ವಹಿಸಬಹುದಾದ ಕೆಲವು ಯೋಜನೆಗಳ ಸಾಧ್ಯತೆಗಳಷ್ಟೇ... ಇಂತಹ "ಒಂದು ವರ್ಷದ ಸಂಗ್ರಹಾತ್ಮಕ ಕಲಾತ್ಮಕ ಹಾಗೂ ಸಾಂಸ್ಕೃತಿಕ ಸರಣಿ ಕಾರ್ಯಕ್ರಮ"ಗಳ

ಪ್ರಸ್ತಾವನೆಗಳನ್ನು ನಾವು ನಿರೀಕ್ಷಿಸುತ್ತೇವೆ. ಈ ಯೋಜನೆಗಳು ನಗರದ ಬಹು ಆಯಾಮಗಳನ್ನು ಪ್ರತಿಬಿಂಬಿಸುವ, ಪ್ರಶ್ನಿಸುವಂತಿರಬೇಕು. ಈ ಕಾರ್ಯಕ್ರಮಗಳು ಕಥಾಸಮಯ, ಸಂಗೀತ, ಅಭಿನಯ, ಇನ್‌ಸ್ಟಲೇಷನ್ಸ್, ಪ್ರದರ್ಶನಗಳು, ಕಾರ್ಯಾಗಾರಗಳು, ನಕ್ಷಾ ಅಭ್ಯಾಸಗಳು, ಸಭೆಗಳು, ಆಟದ ಸಮಯ, ಉಪನ್ಯಾಸಗಳು, ಪ್ರಾತಕ್ಷಿಕೆಗಳು, ಸಾರ್ವಜನಿಕ ಚರ್ಚೆಗಳು ಮತ್ತು ಇಂಥಹ ಇನ್ನಿತರ ಚಟುವಟಿಕೆಗಳನ್ನು ಒಳಗೊಂಡಿರಬಹುದು. ಇದರಿಂದ ನಗರದ ಕುರಿತಾಗಿ ಹೊಸ ಆಯಾಮಗಳು ದಕ್ಕುವಂತೆ, ಹೊಸ ಧ್ವನಿಗಳಿಗೆ ಅವಕಾಶ ಸಿಗುವಂತೆ ಆಗಬೇಕು.

ಈ ಅನುದಾನದಿಂದ ನಿಮ್ಮದೇ ಆದ ವೈವಿಧ್ಯಮಯ ಬೆಂಗಳೂರಿನ ಚಿತ್ರವನ್ನು ಸೃಷ್ಟಿಸಿಕೊಳ್ಳಿ. ನಗರವನ್ನು ತಿದ್ದಿ ತೀಡುವ ವಿವಿಧ ಅಂಶಗಳೊಂದಿಗೆ ತೊಡಗಿಸಿಕೊಳ್ಳಿ. ನಗರದ ಭೂತ, ವರ್ತಮಾನ ಹಾಗೂ ಭವಿಷ್ಯಗಳೊಂದಿಗೆ ಪರಸ್ಪರ ಒಂದು ಸಂವಾದವನ್ನು ಸಾಧ್ಯವಾಗಿಸಿ. ಕಾಳಜಿ ಹಾಗೂ ಕಲ್ಪನೆಗಳ ನಡುವಿನ ಅಂತರ್‌ಸಂಬಂಧಗಳನ್ನು ಕಾಣಿಸಿ. ಕಲೆ, ಕಾರ್ಯಾನುಭವ, ವಿಜ್ಞಾನ, ಪರಿಸರ, ನಗರೀಕರಣ, ತಂತ್ರಜ್ಞಾನ,

ಭಾಷೆ ಮತ್ತು ಸಮುದಾಯಗಳು ಮುಂತಾದ ಭಿನ್ನ ಧ್ವನಿಗಳು ಸೇರಿ ಮಾತನಾಡುವ ಒಂದು ಸೃಜನಶೀಲ ಹಾಗೂ ವಿಶಾಲ ವೇದಿಕೆಯನ್ನು ರಚಿಸಿ.

**ಯೋಜನೆಯ ಅವಧಿ :** ನವೆಂಬರ್ 2018 ರಿಂದ ಪ್ರಾರಂಭವಾಗಿ 12 ತಿಂಗಳುಗಳ ಕಾಲ ನಿಯಮಿತವಾಗಿ 8–12 ಚಟುವಟಿಕೆಗಳನ್ನು ಆಯೋಜಿಸಬೇಕು.

**ಆಯವ್ಯಯ :** ಗರಿಷ್ಟ ರೂ. 8 ಲಕ್ಷ

**ಯಾರು ಅರ್ಜಿ ಸಲ್ಲಿಸಬಹುದು?** ;

- ಕಲಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೆಂಗಳೂರಿನ ನೋಂದಾಯಿತ ಲಾಭಾಪೇಕ್ಷೆಯಿಲ್ಲದ ಸಂಘ–ಸಂಸ್ಥೆಗಳು
- ವಯಕ್ತಿಕ ಕಲಾವಿದರು ಅಥವಾ ಕಲಾತಂಡದೊಂದಿಗೆ ಬೆಂಗಳೂರಿಗೆ ಸಂಬಂಧಿಸಿದಂತೆ ಯಾವುದಾದರೂ ವಿಷಯದ ಕುರಿತು ಕೆಲಸ ಮಾಡುತ್ತಿರುವ ನೋಂದಾಯಿತ ಲಾಭಾಪೇಕ್ಷೆಯಿಲ್ಲದ ಸಂಘ–ಸಂಸ್ಥೆಗಳು
- ನೋಂದಾಯಿತ ಲಾಭಾಪೇಕ್ಷೆಯಿಲ್ಲದ ಸಂಘ–ಸಂಸ್ಥೆಗಳ ಪರವಾಗಿ ಕಲಾಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ವೈಯಕ್ತಿಕ ವ್ಯಕ್ತಿ

**ಅರ್ಜಿ ಸಲ್ಲಿಸುವುದು ಹೇಗೆ?** ;

ಈ ಕೆಳಕಂಡ ಅಂಶಗಳನ್ನು ಒಳಗೊಂಡಂತೆ ಪ್ರಸ್ತಾವನೆ ಕಳುಹಿಸಿ

- ಅರ್ಜಿಯಲ್ಲಿ ನಿಮ್ಮ ಸಂಸ್ಥೆಯ ಕುರಿತು, ಇದುವರೆಗಿನ ಕಾರ್ಯಗಳ ಕುರಿತು ಹಾಗೂ ಈ ಅನುದಾನದ ಕರೆ ಹೇಗೆ ನಿಮಗೆ ಇಷ್ಟವಾಯಿತು ಎಂಬುದರ ಕುರಿತು ಬರೆಯಿರಿ.
- ನಿಮ್ಮ ಯೋಜನೆಯ ವಿವರಗಳು, ನೀವು ಒಳಗೊಳ್ಳುವ ವ್ಯಕ್ತಿಗಳು ಹಾಗೂ ಸ್ಥಳಗಳ ಕುರಿತು ಬರೆಯಿರಿ.
- ಕಾಲಮಿತಿ ಹಾಗೂ ಆಯವ್ಯಯ
- ಸಂಸ್ಥೆಯ ದತ್ತಿಕರಾರುಪತ್ರ (ಟ್ರಸ್ಟ್‌ಡೀಡ್), ಟ್ರಸ್ಟಿಗಳ ಪಟ್ಟಿ, ಅಧಿನಿಯಮ 12ಎ, ಆದಾಯ ತೆರಿಗೆ ಕಾಯ್ದೆ 1961 ಪ್ರಕಾರ ನೊಂದಾಯಿತ ಪ್ರಮಾಣಪತ್ರ, ಅಧಿನಿಯಮ 80ಜಿ ಪ್ರಕಾರ ವಿನಾಯಿತಿ ಪ್ರಮಾಣಪತ್ರ, ಆಡಿಟ್‌ಗೆ ಒಳಪಟ್ಟಂತೆ ಲೆಕ್ಕಪತ್ರಗಳ ಹೇಳಿಕೆ ಮತ್ತು ಹಿಂದಿನ ಮೂರು ವರ್ಷಗಳ (ಇದ್ದರೆ ಇನ್ನೂ ಹೆಚ್ಚಿನವು)ವಾರ್ಷಿಕ ವರದಿಗಳು, ಎಫ್‌ಸಿಆರ್‌ಎ ಕಾಯ್ದೆಯ ಅಡಿಯಲ್ಲಿ ನೋಂದಾಯಿತ ಪ್ರಮಾಣಪತ್ರ (ಇದ್ದಲ್ಲಿ)

**ನಿಮ್ಮ ಪ್ರಸ್ತಾವನೆಗಳನ್ನು ಇಂಗ್ಲೀಷ್ ಒಳಗೊಂಡಂತೆ ಯಾವುದಾದರೂ ಭಾರತೀಯ ಭಾಷೆಯಲ್ಲಿ ಬರೆಯಬಹುದು.**

ನಿಮ್ಮ ಪ್ರಸ್ತಾವನೆಗಳನ್ನು ಕಳೂಹಿಸುವ ಪೂರ್ವದಲ್ಲಿ ನೀವು ದೂರವಾಣಿ, ಇ–ಮೇಲ್ ಮುಖಾಂತರ ಅಥವಾ ಖುದ್ದಾಗಿ ನಮ್ಮನ್ನು ಸಂಪರ್ಕಿಸಬಹುದು. ಪ್ರಸ್ತಾವನೆಯ ದಾಖಲೆಗಳೊಂದಿಗೆ ಹಾರ್ಡ್‌ಕಾಪಿ ರೂಪದಲ್ಲಿ ಸೆಪ್ಟೆಂಬರ್ 14, 2018 ಶುಕ್ರವಾರದೊಳಗೆ ನಮ್ಮನ್ನು ತಲುಪಬೇಕು. ದಯವಿಟ್ಟು ಗಮನಿಸಿ ಆನ್‌ಲೈನ್ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುವುದಿಲ್ಲ.

**ಆಯ್ಕೆ ವಿಧಾನ :**

ಬಾಹ್ಯ ಸಮಿತಿ ಕೆಲವು ಆಯ್ದ ಪ್ರಸ್ತಾವನೆಗಳನ್ನು ಪರಿಶೀಲಿಸುತ್ತದೆ. ಈ ಪ್ರಸ್ತಾವನೆಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಲು ಸಾಧ್ಯವಾಗುವಂತೆ ಅರ್ಜಿದಾರರಿಗೆ ಸೂಚಿಸಲಾಗುವುದು. ಇವುಗಳಲ್ಲಿ ಎರಡು ಪ್ರಸ್ತಾವನೆಗಳನ್ನು ಅಕ್ಟೋಬರ್ 2018ರಲ್ಲಿ ಆಯ್ಕೆ ಮಾಡಿ ಪ್ರಕಟಿಸಲಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಐಎಫ್ಎ ನ ನಿರ್ಧಾರ ಅಂತಿಮವಾಗಿರುತ್ತದೆ.

**ಹೆಚ್ಚಿನ ಮಾಹಿತಿಗಾಗಿ**

ಐಎಫ್ಎನ ಶುಭಂ ರಾಯ್ ಚೌದರಿ ಕಾರ್ಯಕ್ರಮ ನಿರ್ವಾಹಕರು, shubham@indiaifa.org

ಇವರನ್ನು ಸಂಪರ್ಕಿಸಬಹುದು.

**ನಿಮ್ಮ ಪ್ರಸ್ತಾವನೆಗಳನ್ನು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.**

**ಪ್ರಾಜೆಕ್ಟ್ 560, 2018**
**ಒಂದು ವರ್ಷದ ಸಂಗ್ರಹಾತ್ಮಕ ಕಲಾತ್ಮಕ ಹಾಗೂ ಸಾಂಸ್ಕೃತಿಕ ಸರಣಿ ಕಾರ್ಯಕ್ರಮಗಳು**
ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್
'ಅಪೂರ್ವ' ನೆಲಮಹಡಿ , ಸಂಖ್ಯೆ 259
ನಾಲ್ಕನೇ ತಿರುವು, ರಾಜ್ ಮಹಲ್ ವಿಲಾಸ್,
ಎರಡನೇ ಹಂತ, ಎರಡನೇ ಬ್ಲಾಕ್,
ಬೆಂಗಳೂರು– 560 094
ದೂರವಾಣಿ : 080–23414681/82/83
http://www.indiaifa.org/

**ಪ್ರಾಜೆಕ್ಟ್ 560 ರ ಕುರಿತು:**

**ಪ್ರಾಜೆಕ್ಟ್** 560 ಇದು ಐಎಫ್ಎ ಸಂಸ್ಥೆಯು ಬೆಂಗಳೂರಿಗೆ ವಿಶೇಷವಾಗಿ ಹಮ್ಮಿಕೊಂಡದ್ದಾಗಿದೆ. ಬೆಂಗಳೂರಿನ ಪಿನ್‌ಕೋಡ್‌ನ ಮೊದಲ ಮೂರು ಸಂಖ್ಯೆಗಳನ್ನು ಬಳಸಿಕೊಂಡು ಈ ಯೋಜನೆಯನ್ನು ಹೆಸರಿಸಲಾಗಿದೆ. ಯೋಜನೆ 560  ಕಲಾವಿದರು, ಮೇಧಾವಿಗಳು, ಸಂಘ–ಸಂಸ್ಥೆಗಳು ನೆರೆಹೊರೆಯವರೊಂದಿಗೆ ಕ್ರಿಯಾತ್ಮಕವಾಗಿ ಒಡನಾಡುವಂತೆ ಬಯಸುತ್ತದೆ. ಇದರ ಗುರಿ ಜನರಿಗೆ ನಗರದ ವಿಭಿನ್ನ ಅನುಭವಗಳನ್ನು ವಿವಿಧ ಆಯಾಮಗಳಲ್ಲಿ ಅನ್ವೇಷಿಸುವಂತೆ ಮಾಡುವುದಾಗಿದೆ. ನಗರ ಜೀವನವನ್ನು ಸಂಬಂಧಗಳೊಂದಿಗೆ ಹೊಸ ಬಗೆಗಳಲ್ಲಿ ಉತ್ಸಾಹದಿಂದ ಕಲ್ಪಿಸಿಕೊಳ್ಳಲು ಸಾಧ್ಯ ಮಾಡುವುದಾಗಿದೆ.

ನಮ್ಮ 560, ನಮ್ಮ ಪ್ರಾಜೆಕ್ಟ್ , ನಮ್ಮ ಪಿನ್‌ಕೋಡ್

**ಪ್ರಾಜೆಕ್ಟ್ 560 ಸಿಟಿ ಇಂಡಿಯಾದ ಸಹಭಾಗಿತ್ವ ಹೊಂದಿದೆ.**